ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ಕೊರೋನಾ ಹಾನಿಯಿಂದ ಭಾದೆಗೊಳಗಾದವರು

ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):-

612(656) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕೊರೋನಾ ಹಾನಿಯಿಂದ ಭಾದೆಗೊಳಗಾದವರ ಸಂಖ್ಯೆ ಎಷ್ಟು; (ಜಾತಿವಾರು ವಿವರ ನೀಡುವುದು)

(ಆ) ಬಾಧೆಗೊಳಗಾದವರ ಆಸ್ಪತ್ರೆಗಳ ಚಿಕಿತ್ಸಾ ವೆಚ್ಚ ಹಾಗೂ ಔಷಧಿ ವೆಚ್ಚವನ್ನು ಸರ್ಕಾರ ಪಾವತಿಸಿದೆಯೇ;

(ಇ) ಮಧ್ಯಮ ವರ್ಗದ ಬಾಧಿತರಿಗೆ ಯಾವ ರೀತಿಯಲ್ಲಿ ಸರ್ಕಾರ ಸಹಾಯ ಮಾಡಿದೆ;

(ಈ) ಮಧ್ಯಮ ವರ್ಗದ ಬಡವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ ಅಥವಾ ದಾಖಲಾಗಿದ್ದಲ್ಲಿ ಅವರಿಗೆ ಸರ್ಕಾರ ಯಾವ ರೀತಿ ಸಹಾಯ ಮಾಡಿದೆ;

(ಉ) ಕೊರೋನಾಗೆ ಸಂಬಂಧಿಸಿದಂತೆ ಸರ್ಕಾರ ಯಾವ ಯಾವ ಬಾಬ್ತಿನಲ್ಲಿ ಎಷ್ಟು ಖರ್ಚು ಮಾಡಿದೆ? (ವಿವರಗಳನ್ನು ಒದಗಿಸುವುದು)